## ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: ಸಾಸ್ವೆಹಳ್ಳಿ ಏತ ನೀರಾವರಿ ಯೋಜನೆಯಡಿ ಕೆರೆಗಳನ್ನು ವೃದ್ಧಿಸುವ ಯೋಜನೆಯನ್ನು ಎರಡು ಹಂತಗಳಲ್ಲಿ [ಹಂತ-1: ರೂ.121.00 ಕೋಟಿ ಮತ್ತು ಹಂತ-2: ರೂ.46.00 ಕೋಟಿ] ಒಟ್ಟಾರೆ ರೂ.167.00 ಕೋಟಿಗಳ ವೆಚ್ಚದಲ್ಲಿ ಕೈಗೆತ್ತಿಕೊಳ್ಳಲು ಉದ್ದೇಶಿಸಿದ್ದು, 2018-19 ನೇ ಸಾಲಿನ ದರಪಟ್ಟಿಯನ್ವಯ ಸಿದ್ಧಪಡಿಸಿರುವ ಯೋಜನೆಯ ವಿವರವಾದ ಯೋಜನಾ ವರದಿಗೆ ಆಡಳಿತಾತ್ಮಕ ಅನುಮೋದನೆ ನೀಡುವ ಕುರಿತು.

ಓದಲಾಗಿದೆ: 1. ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ನೀರಾವರಿ ನಿಗಮ, ಇವರ ಪತ್ರ ಸಂಖ್ಯೆ: ಕನೀನಿ/ ಸಾಸ್ವೆಹಳ್ಳಿ ಕೆರೆ –Augmentation/ ಡಿ.ಪಿ.ಆರ್/ 2020/ 5318, ದಿನಾಂಕ:27.11.2020.

2. ಸರ್ಕಾರದ ಆದೇಶ ಸಂಖ್ಯೆ:ಜಸಂಇ 85 ಎಂಎಂಬಿ 2016, ದಿನಾಂಕ:11.01.2017.

****

ಪ್ರಸ್ತಾವನೆ:

ಮೇಲೆ ಓದಲಾದ (1)ರ ಪತ್ರದಲ್ಲಿ ಸಾಸ್ವೆಹಳ್ಳಿ ಏತ ನೀರಾವರಿ ಯೋಜನೆಯಡಿ ಕೆರೆಗಳನ್ನು ವೃದ್ಧಿಸುವ ಯೋಜನೆಯನ್ನು ಎರಡು ಹಂತಗಳಲ್ಲಿ [ಹಂತ-1: ರೂ.121.00 ಕೋಟಿ ಮತ್ತು ಹಂತ-2: ರೂ.46.00 ಕೋಟಿ] ಒಟ್ಟಾರೆ ರೂ. 167.00 ಕೋಟಿಗಳ ವೆಚ್ಚದಲ್ಲಿ ಕೈಗೆತ್ತಿಕೊಳ್ಳಲು ಉದ್ದೇಶಿಸಲಾಗಿದ್ದು, ತುಂಗಭದ್ರಾ ನದಿಯಿಂದ 180 ದಿನಗಳ ಅವಧಿಯಲ್ಲಿ 2.91 ಕ್ಯೂಮೆಕ್ಸ್ ನೀರನ್ನು ಎತ್ತಲು ಉದ್ದೇಶಿಸಲಾಗಿದೆ ಎಂದು ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ನೀರಾವರಿ ನಿಗಮ ನಿಯಮಿತ ರವರು ತಿಳಿಸಿರುತ್ತಾರೆ.

ಮೇಲೆ ಓದಲಾದ (2)ರ ಸರ್ಕಾರದ ಆದೇಶದಲ್ಲಿ, ದಾವಣಗೆರೆ ಜಿಲ್ಲೆ, ಹೊನ್ನಾಳಿ ತಾಲ್ಲೂಕು, ಸಾಸ್ವೆಹಳ್ಳಿ ಹತ್ತಿರ ತುಂಗಭದ್ರಾ ನದಿಯಿಂದ 0.989 ಟಿಎಂಸಿ ನೀರನ್ನು ಎತ್ತಿ ಎರಡು ಹಂತಗಳಲ್ಲಿ ದಾವಣಗೆರೆ, ಚಿತ್ರದುರ್ಗ ಮತ್ತು ಶಿವಮೊಗ್ಗ ಜಿಲ್ಲೆಗಳ ಒಟ್ಟಾರೆ 121 ಕೆರೆಗಳಿಗೆ ನೀರೊದಗಿಸುವ ಏತ ನೀರಾವರಿ ಯೋಜನೆಯ ರೂ.415.68 ಕೋಟಿ ಮೊತ್ತದ ವಿವರವಾದ ಯೋಜನಾ ವರದಿಗೆ ಆಡಳಿತಾತ್ಮಕ ಅನುಮೋದನೆ ನೀಡಲಾಗಿರುತ್ತದೆ. ಪ್ರಸ್ತುತ, ಪ್ರಸ್ತಾಪಿಸಿರುವ ಯೋಜನೆಯನ್ನು ಸಮರ್ಪಕವಾಗಿ ನಿರ್ವಹಿಸಲು ಹಾಗೂ ನೀರಿನ ಹೆಚ್ಚುವರಿ ಹರಿಯುವಿಕೆಗಾಗಿ ಪೂರಕ ಅಂದಾಜು ಅವಶ್ಯವಿರುತ್ತದೆ ಎಂದು ತಿಳಿಸಿ ಸಾಸ್ವೆಹಳ್ಳಿ ಏತ ನೀರಾವರಿ ಯೋಜನೆಯಡಿ ಕೆರೆಗಳನ್ನು ವೃದ್ಧಿಸುವ ಯೋಜನೆಯನ್ನು ರೂ.167.00 ಕೋಟಿಗಳ ವೆಚ್ಚಗಳಲ್ಲಿ ಕೈಗೆತ್ತಿಕೊಳ್ಳಲು ಉದ್ದೇಶಿಸಲಾಗಿದೆ ಎಂದು ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ನೀರಾವರಿ ನಿಗಮ ನಿಯಮಿತ ರವರು ತಿಳಿಸಿರುತ್ತಾರೆ.

ಮುಂದುವರೆದು, ಪ್ರಸ್ತಾವನೆಯನ್ನು ದಿನಾಂಕ:04.09.2020. ರಂದು ಜರುಗಿದ ನಿಗಮದ ಅಂದಾಜು ಪರಿಶೀಲನಾ ಸಮಿತಿಯ 71ನೇ ಸಭೆಯಲ್ಲಿ ಮಂಡಿಸಲಾಗಿದ್ದು, ಸಮಿತಿಯು ನಿಗಮದ ನಿರ್ದೇಶಕರ ಮಂಡಳಿಯ ಅನುಮೋದನೆ ಪಡೆದು, ಸರ್ಕಾರಕ್ಕೆ ಆಡಳಿತಾತ್ಮಕ ಅನುಮೋದನೆಗೆ ಸಲ್ಲಿಸಲು ಶಿಫಾರಸ್ಸು ಮಾಡಿರುತ್ತದೆ; ಅದರನ್ವಯ ಪ್ರಸ್ತಾವನೆಯನ್ನು ದಿನಾಂಕ:05.10.2020 ರಂದು ಜರುಗಿದ ನಿಗಮದ ನಿರ್ದೇಶಕರ ಮಂಡಳಿಯ 93ನೇ

ಸಭೆಯಲ್ಲಿ ಮಂಡಿಸಲಾಗಿ, ಚರ್ಚೆಯ ನಂತರ, Augmentation of Tanks considered under Sasvehalli LIS ಯೋಜನೆಯ ಕಾಮಗಾರಿಯನ್ನು ಎರಡು ಹಂತಗಳಲ್ಲಿ ರೂ.167.00 ಕೋಟಿಗಳಲ್ಲಿ [ಹಂತ-1: ರೂ.121.00 ಕೋಟಿ ಮತ್ತು ಹಂತ-2: ರೂ.46.00 ಕೋಟಿ] ಕೈಗೆತ್ತಿಕೊಳ್ಳುವ ವಿವರವಾದ ಯೋಜನಾ ವರದಿಗೆ, ಮಂಡಳಿಯು ಅನುಮೋದನೆ ನೀಡಿ, ಆಡಳಿತಾತ್ಮಕ ಅನುಮೋದನೆ ಪಡೆಯಲು ಸರ್ಕಾರಕ್ಕೆ ಶಿಫಾರಸ್ಸು ಮಾಡಿರುತ್ತದೆ ಎಂದು ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ನೀರಾವರಿ ನಿಗಮ ನಿಯಮಿತ ರವರು ವರದಿಸಿರುತ್ತಾರೆ.

ಅದರಂತೆ, ದಾವಣಗೆರೆ ಜಿಲ್ಲೆ ಹೊನ್ನಾಳಿ ತಾಲ್ಲೂಕು, ಸಾಸ್ವೆಹಳ್ಳಿ ಏತ ನೀರಾವರಿ ಯೋಜನೆಯಡಿ ಕೆರೆಗಳನ್ನು ವೃದ್ಧಿಸುವ (Augmentation of Tanks considered under Sasvehalli LIS) ಯೋಜನೆಯ ಕಾಮಗಾರಿಯನ್ನು ಎರಡು ಹಂತಗಳಲ್ಲಿ [ಹಂತ-1: ರೂ.121.00 ಕೋಟಿ ಮತ್ತು ಹಂತ-2: ರೂ.46.00 ಕೋಟಿ] ಕೈಗೆತ್ತಿಕೊಳ್ಳುವ ವಿವರವಾದ ಯೋಜನಾ ವರದಿಗೆ ಆಡಳಿತಾತ್ಮಕ ಅನುಮೋದನೆ ನೀಡುವಂತೆ ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ನೀರಾವರಿ ನಿಗಮ ನಿಯಮಿತ ರವರು ದಿನಾಂಕ:27.11.2020 ರ ಪತ್ರದಲ್ಲಿ ಕೋರಿರುತ್ತಾರೆ.

ಪ್ರಸ್ತಾವನೆಯನ್ನು ಪರಿಶೀಲಿಸಿ, ಈ ಕೆಳಕಂಡಂತೆ ಆದೇಶಿಸಲಾಗಿದೆ.

**ಸರ್ಕಾರದ ಆದೇಶ ಸಂಖ್ಯೆ: ಜಸಂಇ 08 ಎಂಎಂಬಿ 2021,**
**ಬೆಂಗಳೂರು, ದಿನಾಂಕ:25.06.2021**

ಸಾಸ್ವೆಹಳ್ಳಿ ಏತ ನೀರಾವರಿ ಯೋಜನೆಯಡಿ ಕೆರೆಗಳನ್ನು ವೃದ್ಧಿಸುವ ಯೋಜನೆಯನ್ನು ಎರಡು ಹಂತಗಳಲ್ಲಿ [ಹಂತ-1: ರೂ.121.00 ಕೋಟಿ ಮತ್ತು ಹಂತ-2: ರೂ.46.00 ಕೋಟಿ] ಒಟ್ಟಾರೆ ರೂ. 167.00 ಕೋಟಿಗಳ (ಒಂದು ನೂರಾ ಅರವತ್ತೇಳು ಕೋಟಿ ರೂಪಾಯಿಗಳು ಮಾತ್ರ) ವೆಚ್ಚದಲ್ಲಿ ಕೈಗೆತ್ತಿಕೊಳ್ಳಲು ಉದ್ದೇಶಿಸಿದ್ದು, 2018-19ನೇ ಸಾಲಿನ ದರಪಟ್ಟಿಯನ್ವಯ ಸಿದ್ಧಪಡಿಸಿರುವ ಯೋಜನೆಯ ವಿವರವಾದ ಯೋಜನಾ ವರದಿಗೆ ಆಡಳಿತಾತ್ಮಕ ಅನುಮೋದನೆ ನೀಡಲಾಗಿದೆ.

ಈ ಆದೇಶವನ್ನು ಆರ್ಥಿಕ ಇಲಾಖೆಯ ಟಿಪ್ಪಣಿ ಸಂಖ್ಯೆ: ಆಇ 72 ಆಕೋ-1/2021 (e-office), ದಿನಾಂಕ:05.06.2021 ರಲ್ಲಿ ಹಾಗೂ ಯೋಜನಾ ಇಲಾಖೆಯ ಟಿಪ್ಪಣಿ ಸಂಖ್ಯೆ: ಪಿಡಿಎಸ್/11/ಎಂಸಿಎಂ/2021/ಪಿಪಿಡಿ, ದಿನಾಂಕ: 29.01.2021 ರಲ್ಲಿ ನೀಡಿರುವ ಸಹಮತಿಯನ್ವಯ ಹೊರಡಿಸಲಾಗಿದೆ.

**ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ**
**ಮತ್ತು ಅವರ ಹೆಸರಿನಲ್ಲಿ,**

25/6/21

(ಶ್ರೀಹರಿ ಎಸ್.ಆರ್.)
ಸರ್ಕಾರದ ಅಧೀನ ಕಾರ್ಯದರ್ಶಿ(ತಾಂತ್ರಿಕ-1)
ಜಲಸಂಪನ್ಮೂಲ ಇಲಾಖೆ.

ಇವರಿಗೆ:

1. ಪ್ರಧಾನ ಮಹಾಲೇಖಪಾಲರು, (ಸಾಮಾನ್ಯ ಮತ್ತು ಸಾಮಾಜಿಕ ವಲಯ, ಲೆಕ್ಕಪರಿಶೋಧನೆ), ಕರ್ನಾಟಕ, ಹೊಸ ಕಟ್ಟಡ, ಆಡಿಟ್ ಭವನ, ಅಂಚೆ ಪೆಟ್ಟಿಗೆ ಸಂಖ್ಯೆ:5398, ಬೆಂಗಳೂರು.

2. ಪ್ರಧಾನ ಮಹಾಲೇಖಪಾಲರು, (ಆರ್ಥಿಕ ಮತ್ತು ರಾಜಸ್ವ ವಲಯ ಲೆಕ್ಕಪರಿಶೋಧನೆ), ಕರ್ನಾಟಕ, ಹೊಸ ಕಟ್ಟಡ, ಆಡಿಟ್ ಭವನ, ಅಂಚೆ ಪೆಟ್ಟಿಗೆ ಸಂಖ್ಯೆ:5398, ಬೆಂಗಳೂರು.
3. ಪ್ರಧಾನ ಮಹಾಲೇಖಪಾಲರು, (ಲೆಕ್ಕಗಳು ಮತ್ತು ಹಕ್ಕುಸ್ವಾಮ್ಯ) ಕರ್ನಾಟಕ ಬೆಂಗಳೂರು.
4. ಸರ್ಕಾರದ ಉಪಕಾರ್ಯದರ್ಶಿ, (ಸಚಿವ ಸಂಪುಟ ಶಾಖೆ) ವಿಧಾನಸೌಧ. (ಸಚಿವ ಸಂಪುಟ ಪ್ರಕರಣ ಸಂಖ್ಯೆ:238/2021, ದಿನಾಂಕ:21.06.2021ರ ಮೇರೆಗೆ)
5. ಮಾನ್ಯ ಮುಖ್ಯಮಂತ್ರಿಯವರ ಆಪ್ತ ಕಾರ್ಯದರ್ಶಿಗಳು, ವಿಧಾನಸೌಧ.
6. ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ನೀರಾವರಿ ನಿಗಮ ನಿಯಮಿತ, ಬೆಂಗಳೂರು.
7. ಮುಖ್ಯ ಇಂಜಿನಿಯರ್, ತುಂಗಾ ಮೇಲ್ದಂಡೆ ಯೋಜನಾ ವಲಯ, ಶಿವಮೊಗ್ಗ.
8. ವಿಶೇಷಾಧಿಕಾರಿ ಹಾಗೂ ಪದನಿಮಿತ್ತ ಸರ್ಕಾರದ ಉಪಕಾರ್ಯದರ್ಶಿಗಳು, ಆರ್ಥಿಕ ಇಲಾಖೆ (ಲೋ.ಇ, ಆರ್ಥಿಕ ಕೋಶ) ವಿಧಾನ ಸೌಧ, ಬೆಂಗಳೂರು.
9. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿ, ಜಲಸಂಪನ್ಮೂಲ ಇಲಾಖೆ.
10. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿ, ಯೋಜನಾ ಇಲಾಖೆ.
11. ಸರ್ಕಾರದ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿ, ಜಲಸಂಪನ್ಮೂಲ ಇಲಾಖೆ.
12. ಸರ್ಕಾರದ ಹೆಚ್ಚುವರಿ ಕಾರ್ಯದರ್ಶಿಯವರ ಆಪ್ತ ಸಹಾಯಕರು, ಜಲಸಂಪನ್ಮೂಲ ಇಲಾಖೆ.
13. ಸರ್ಕಾರದ ಉಪ ಕಾರ್ಯದರ್ಶಿಯವರ ಆಪ್ತ ಸಹಾಯಕರು, (ಕೃ.ಭಾ.ಜ.ನಿ.) ಜ.ಸಂ. ಇಲಾಖೆ.
14. ತಾಂತ್ರಿಕ ಸಹಾಯಕರು, (ತಾಂತ್ರಿಕ-6) ಜಲ ಸಂಪನ್ಮೂಲ ಇಲಾಖೆ.
15. ಶಾಖಾ ರಕ್ಷಾ ಕಡತ/ಹೆಚ್ಚುವರಿ ಪ್ರತಿಗಳು.